1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**:**	**(194)238**
2. ಸದಸ್ಯರ ಹೆಸರು	**:**	**ಶ್ರೀ ನರೇಂದ್ರ ಬಾಬು ಎನ್.ಎಲ್**
3. ಉತ್ತರಿಸುವವರು	**:**	**(ಶ್ರೀ ಬಿ.ಎಸ್.ಯಡಿಯೂರಪ್ಪ)**
	:	**ಮಾನ್ಯ ಮುಖ್ಯಮಂತ್ರಿಗಳು**

1 ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ಬಿ.ಬಿ.ಎಮ್.ಪಿ ವ್ಯಾಪ್ತಿಯಲ್ಲಿನ ಅನಧಿಕೃತ ಕಟ್ಟಡಗಳನ್ನು ಸಕ್ರಮ ಗೊಳಿಸುವ ಬಗ್ಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಸರ್ಕಾರಕ್ಕೆ ಸಲ್ಲಿಸಿದ ತಿದ್ದುಪಡಿ ಕಾಯ್ದೆಯ ಅಂಗೀಕಾರವಾಗಿದೆಯೇ;

ಹೌದಾದಲ್ಲಿ, ಸದರಿ ಕಾಯ್ದೆಯ ಪ್ರತಿಯನ್ನು ಒದಗಿಸುವುದು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ಬಿ.ಬಿ.ಎಂ.ಪಿ ವ್ಯಾಪ್ತಿಯನ್ನು ಒಳಗೊಂಡಂತೆ ರಾಜ್ಯ ಎಲ್ಲಾ ನಗರ/ಪಟ್ಟಣ ಪ್ರದೇಶಗಳಲ್ಲಿನ ಅನಧಿಕೃತ ಅಭಿವೃದ್ಧಿಗಳನ್ನು ಸಕ್ರಮಗೊಳಿಸುವ ಸಂಬಂಧ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 76(ಎಫ್)ಗಳ ತಿದ್ದುಪಡಿ ಹಾಗೂ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್‌ಗಳ ಕಾಯ್ದೆ, 1976ರ ಕಲಂ 321ಕ್ಕೆ ಮತ್ತು ಕರ್ನಾಟಕ ಮುನಿಸಿಪಾಲಿಟೀಸ್ ಕಾಯ್ದೆ 1964ರ ಕಲಂ 187ಕ್ಕೆ ತಿದ್ದುಪಡಿ ವಿಧೇಯಕ 2004ನ್ನು ವಿಧಾನಮಂಡಲದ ಉಭಯ ಸದನಗಳಲ್ಲಿ ಮಂಡಿಸಿ ಅಂಗೀಕಾರ ಪಡೆದು ಘನತೆವೆತ್ತ ರಾಜ್ಯಪಾಲರ ಅನುಮೋದನೆಯೊಂದಿಗೆ ದಿ:06-02-2007ರಂದು ಪ್ರಕಟಿಸಿದೆ.

ಪ್ರತಿ ಲಗತ್ತಿಸಿದೆ.

2 ಇಲ್ಲವಾದಲ್ಲಿ, ಪ್ರಸ್ತಾವನೆಯು ಸರ್ಕಾರದಲ್ಲಿ ಯಾವ ಹಂತದಲ್ಲಿದೆ;

ಉದ್ಭವಿಸುವುದಿಲ್ಲ

3 ತಿದ್ದುಪಡಿ ಕಾಯ್ದೆಯನ್ನು ಜಾರಿಗೊಳಿಸಲು ವಿಳಂಬಕ್ಕೆ ಕಾರಣವೇನು;

ನಿಯಮಗಳನ್ನು ಪರಿಶೀಲಿಸಲು ಸಚಿವ ಸಂಪುಟದ ಉಪ ಸಮಿತಿಯನ್ನು ರಚಿಸಿದ್ದು, ಸದರಿ ಉಪ ಸಮಿತಿಯು ಪರಿಶೀಲಿಸುತ್ತಿದೆ.

4 ಈ ಕಾಯ್ದೆಯಡಿ ಸಕ್ರಮಗೊಳಿಸಲು ಅರ್ಹವಿರುವ ನಿವೇಶನಗಳ ಗರಿಷ್ಟ ವಿಸ್ತೀರ್ಣವೇನು;

ಗರಿಷ್ಟ ವಿಸ್ತೀರ್ಣವನ್ನು ನಿಗಧಿಪಡಿಸಿರುವುದಿಲ್ಲ

5 ಇದರಿಂದ ಸರ್ಕಾರ/ಬಿ.ಡಿ.ಎ.ಗೆ ಬರುವ ಆದಾಯವೆಷ್ಟು?

ನಿಯಮಗಳನ್ನು ಅಂತಿಮಗೊಳಿಸಿದ ನಂತರ ಸದರಿ ಮಾಹಿತಿ ಲಭ್ಯವಾಗುವುದು.

ಅನುಬಂಧ

ಸರ್ಕಾರದ ಸುತ್ತೋಲೆ ಸಂಖ್ಯೆ:ಯುಡಿಡಿ/129/ಎಂಎನ್ಜಿ/97, 06/08/97ರ ವಿವರವು ಈ ಕೆಳಕಂಡಂತಿದೆ;

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಬಿಡಿ ನಿವೇಶನಗಳ ಹಂಚಿಕೆಯ ಬಗ್ಗೆ ಹೊರಡಿಸಿದ್ದ ಎಲ್ಲಾ ಆದೇಶ:ಸುತ್ತೋಲೆಗಳನ್ನು ಸ್ಥಾನ ಚ್ಯುತಿ ಪಡಿಸುತ್ತಾ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ನಿವೇಶನ ಹಂಚಿಕೆ) ನಿಯಮ 1984ರ ನಿಯಮ 5ರ ಅವಕಾಶದಡಿಯಲ್ಲಿ ಬಿಡಿ ನಿವೇಶನ ಹಂಚಿಕೆ ಮಾಡಲು ಈ ಕೆಳಕಂಡಂತೆ ಪರಿಷ್ಕೃತ ಮಾರ್ಗ ಸೂಚಿಯನ್ನು ಹೊರಡಿಸಲಾಗಿದೆ.

ಕ್ರಮ ಸಂಖ್ಯೆ	ಪ್ರವರ್ಗ	ವಿವರಣೆ	ಶೇಕಡಾವಾರು
1	ಎ	ಬಹಿರಂಗ ಹರಾಜಿನ ಮೂಲಕ	30
2	ಬಿ	ಕರ್ನಾಟಕ ರಾಜ್ಯದ ನಿವಾಸಿಗಳಾಗಿ ಕ್ರೀಡೆಯಲ್ಲಿ ಅಂತರರಾಷ್ಟ್ರೀಯ:ರಾಷ್ಟ್ರೀಯ ಮಟ್ಟದಲ್ಲಿ ವಿಶೇಷ ಮಾನ್ಯತೆ ಪಡೆದ ವ್ಯಕ್ತಿಗಳು.	15
3	ಸಿ	ಕಲೆ, ವಿಜ್ಞಾನ, ಸಾಹಿತ್ಯ, ಶಿಕ್ಷಣ, ವೈದ್ಯಕೀಯ, ಚಿತ್ರಕಲೆ, ಶಿಲ್ಪ, ಸಂಗೀತ, ನೃತ್ಯ, ನಾಟಕ, ಸಿನಿಮಾ ಇತ್ಯಾದಿ ಕ್ಷೇತ್ರದಲ್ಲಿ ರಾಷ್ಟ್ರೀಯ:ಅಂತರರಾಷ್ಟ್ರೀಯ ಮಟ್ಟದಲ್ಲಿ ವಿಶೇಷ ಮಾನ್ಯತೆ ಪಡೆದ ವ್ಯಕ್ತಿಗಳು	10
4	ಡಿ	ಕರ್ನಾಟಕ ರಾಜ್ಯದ ನಿವಾಸಿಗಳಾಗಿರುವ ಮಾಜಿ ಸೈನಿಕರು ಹಾಗೂ ಸೈನಿಕ ಸಿಬ್ಬಂದಿ	5
5	ಇ	10 ವರ್ಷಗಳ ಅವಧಿಗಿಂತ ಕಡಿಮೆ ಇಲ್ಲದೇ ಬೆಂಗಳೂರಿನಲ್ಲಿ ವಾಸವಾಗಿರುವ ಸ್ವಾತಂತ್ರ್ಯ ಯೋಧರು	5
6	ಎಫ್	ಕರ್ತವ್ಯ ನಿರತರಾಗಿದ್ದಾಗ ನಿಧನ ಹೊಂದಿದ ರಾಜ್ಯ ಸರ್ಕಾರಿ ನೌಕರರ ಅವಲಂಬಿತರು	5
7	ಜಿ	ಸರ್ಕಾರವು ನಿರ್ದೇಶನ ನೀಡುವ ಸಾರ್ವಜನಿಕ ಜೀವನದಲ್ಲಿನ ವ್ಯಕ್ತಿಗಳು	30